## 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿ.ಸಿ ನಂಬ್ರಃ **1296/2023** ಪಿಡಬ್ಲ್ಯೂ-1

ದಿನಾಂಕಃ 22-04-2025 ರಂದು ಸಾಕ್ಷಿಯನ್ನು ಪುನಹ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

### ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ

### ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಪಿ ಕೆ ಎಸ್ ರವರಿಂದ:

ಆರೋಪಿ ಮತ್ತು ಆರೋಪಿಯ ತಮ್ಮ ಪ್ರವೀಣಕುಮಾರ ಪ್ರತ್ಯೇಕವಾಗಿ ಸಾಲ ಪಡೆದಿದ್ದರು. ಆ 2 ಸಾಲದ ಮರುಪಾವತಿಗಾಗಿ ನಿ.ಪಿ.1 ರ ಚೆಕ್ಕನ್ನು ನೀಡಿರುತ್ತಾರೆ. ಸಾಲ ನೀಡುವಾಗ ಇಬ್ಬರಿಂದಲೂ ಪ್ರತ್ಯೇಕವಾಗಿ ಆಧಾರ ಕಾರ್ಡ, ರೇಷನ ಕಾರ್ಡ, ಸಾಲದ ಅರ್ಜಿ, ಜಾಮೀನುದಾರರ ಸಹಿ, ಪ್ರಾಮಿಸರಿ ನೋಟ್ ಮತ್ತು ಆರ್ ಟಿ ಸಿ ಗಳನ್ನು ಪಡೆದಿರುತ್ತೇವೆ. ನಾವು ಖಾಲಿ ದಾಖಲೆಗಳ ಮೇಲೆ ಸಹಿಯನ್ನು ಪಡೆದಿರುತ್ತೇವೆ ಎಂದರೆ ಸರಿ. ಇಬ್ಬರಿಂದ ಪಡೆದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಆರೋಪಿಗೆ ಮೊದಲನೆ ಜಾಮೀನುದಾರರು ಶಿವರಾಮ ಶೆಟ್ಟಿ, 2 ನೇ ಜಾಮೀನುದಾರರು ಅವರ ತಂದೆ ಹಾಗೂ 3 ನೇ ಜಾಮೀನುದಾರರು ಅವರ ತಮ್ಮ. ಆರೋಪಿಯ ತಮ್ಮ ಪ್ರವೀಣ ಕುಮಾರ ಶೆಟ್ಟಿರವರಿಗೆ ಮೊದಲನೆ ಜಾಮೀನುದಾರರು ಅವರ ತಂದೆ, 2 ನೇ ಜಾಮೀನುದಾರರು ಶಿವರಾಮ ಶೆಟ್ಟಿ ಹಾಗೂ 3 ನೇ ಜಾಮೀನುದಾರರು ಆರೋಪಿ.

ಆರೋಪಿ ಅಂದಾಜು ರೂ.16,000/- ಹಣ ಮತ್ತು ಅವರ ತಮ್ಮ ಅಂದಾಜು ರೂ.16,000/- ಹಣ ಮರುಪಾವತಿ ಮಾಡಿರುತ್ತಾರೆ. ಆರೋಪಿಯ ತಮ್ಮ ಪ್ರವೀಣಕುಮಾರ ಶೆಟ್ಟಿರವರ ಮೇಲೆ ಪ್ರತ್ಯೇಕ ಚೆಕ್ಕು ಅಮಾನ್ಯ ಪ್ರಕರಣ ದಾಖಲಿಸಿಲ್ಲ. ಆರೋಪಿಯ ವಿರುದ್ಧ ಸಿವಿಲ್ ದಾವೆಯನ್ನು ದಾಖಲಿಸಿ ಹಣ ವಸೂಲಿ ಮಾಡಲು ತೊಂದರೆ ಇಲ್ಲ. ಆರೋಪಿಯು ಪಡೆದ ಸಾಲದ ಅವಧಿ 5 ವರ್ಷ. ಆ ಸಾಲದ 5 ವರ್ಷದ ಅವಧಿ ಇನ್ನು ಮುಗಿದಿಲ್ಲ ಎಂದರೆ ಸರಿ. ಸಾಲ ಕೊಡುವ ಸಮಯದಲ್ಲಿ ನಾನು ಸಂಸ್ಥೆಯಲ್ಲಿ ಇರಲಿಲ್ಲ. ಆ ಸಮಯದಲ್ಲಿ ಕೌಶಿಕ್ ಉಡುಪ ಎನ್ನುವವರು ವ್ಯವಸ್ಥಾಪಕರಾಗಿದ್ದರು. ಕೌಶಿಕ್ ಉಡುಪರವರೇ 2 ಸಾಲದ ಮಂಜೂರಾತಿ ಮಾಡಿ ದಾಖಲೆಗಳನ್ನು ಪಡೆದಿರುತ್ತಾರೆ ಎಂದರೆ ಸರಿ. ನಾನು ದಾಖಲೆಗಳ ಆಧಾರದ ಮೇಲೆ ಸಾಕ್ಷಿ ಹೇಳುತ್ತಿದ್ದು, ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ.

ಆರೋಪಿಗೆ ಸಾಲ ನೀಡಿದ ದಿಃ 21-11-2018. ಸಾಲದ ಕಂತುಗಳು ದಿಃ 21-08-2019 ರವರೆಗೆ ನೀಡಲಾಗಿದೆ, ನಂತರದಿಂದ ಸಾಲ ನೀಡಿರುವುದಿಲ್ಲ. ಈಗ ಅವಧಿ ಮೀರಿದ ಸಾಲ ಆಗಿದೆ ಎಂದರೆ ಸರಿ. ನಿ.ಪಿ.1 ರ ಚೆಕ್ಕನ್ನು ಸಾಲ ನೀಡುವ ಸಮಯದಲ್ಲಿ ಭದ್ರತೆಗಾಗಿ ಸಹಿ ಮಾಡಿದ ಖಾಲಿ ಚೆಕ್ಕನ್ನು ಪಡೆದಿರುತ್ತಾರೆ ಎಂದರೆ

ಸರಿಯಲ್ಲ. ನಿ.ಪಿ.1 ರ ಚೆಕ್ಕಿನಲ್ಲಿರುವ ಬರವಣಿಗೆಯನ್ನು ಆರೋಪಿಯು ತಮ್ಮ ಹಸ್ತಾಕ್ಷರದಲ್ಲಿ ಬರೆದಿರುತ್ತಾರೆ. ಆರೋಪಿಯು ಹಣದ ವಸೂಲಾತಿಗಾಗಿ ಅವರ ಮನೆಗೆ ಹೋದಾಗ ನನ್ನ ಎದುರೇ ನಿ.ಪಿ.1 ರ ಚೆಕ್ಕನ್ನು ಬರೆದುಕೊಟ್ಟಿರುತ್ತಾರೆ. ನಿ.ಪಿ.1 ರ ಚೆಕ್ಕನ್ನು ನೀಡುವ ಸಮಯದಲ್ಲಿ ಆರೋಪಿಯ ಮನೆಯಲ್ಲಿ ಅವರ ತಂದೆ ಇದ್ದರು, ಬೇರೆ ಯಾರು ಇದ್ದರು ಎಂದು ನೆನಪಿಲ್ಲ. ನಿ.ಪಿ.1 ರ ಚೆಕ್ಕಿನಲ್ಲಿನ ಸಹಿ ಮತ್ತು ಬರವಣಿಗೆಯಲ್ಲಿನ ಶಾಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿ.ಪಿ.1 ರ ಚೆಕ್ಕಿಗೆ ಸಾಲ ನೀಡುವಾಗ ಸಹಿಯನ್ನು ಪಡೆಯಲಾಗಿರುತ್ತದೆ ಮತ್ತು ಬರವಣಿಗೆಯನ್ನು *2020* ರಲ್ಲಿ ನಮ್ಮ ಸಂಸ್ಥೆಯವರು ಮಾಡಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.1 ರ ಚೆಕ್ಕಿನಲ್ಲಿನ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಚೆಕ್ಕಿನ ಹಿಂಭಾಗದಲ್ಲಿ ಸಹಿ ಮಾಡಿರುವುದಿಲ್ಲ.

ನಾವು ನೀಡಿದ ನೋಟಿಸಿಗೆ ಆರೋಪಿ ಉತ್ತರ ನೀಡಿರುತ್ತಾರೆ ಎಂದರೆ ಸರಿ. ಆರೋಪಿಯಿಂದ ಹೇಗಾದರು ಮಾಡಿ ಹಣ ವಸೂಲಿ ಮಾಡಬೇಕೆಂದು ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಂಸ್ಥೆಯ ಪರವಾಗಿ ಪ್ರಕರಣ ದಾಖಲಿಸಲು ಮತ್ತು ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ಸಂಸ್ಥೆಯ ಪರವಾಗಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ